# ಉದಯವಾಣಿ

**Saturday 25th September 2021, Page No.01 and 07**

**UPSC: RVCE Alumni Yatish R 115 Rank and G. Mamatha 707 Rank**

## ಅಕ್ಷಯ್‌ಗೆ 77ನೇ ರ್‍ಯಾಂಕ್

**ಯುಪಿಎಸ್‌ಸಿ: ರಾಜ್ಯದ 20 ಅಭ್ಯರ್ಥಿಗಳ ತೇರ್ಗಡೆ**

**ದೇಶಾದ್ಯಂತ 761 ಮಂದಿ ಉತ್ತೀರ್ಣ**



ಬೆಂಗಳೂರು : ಯುಪಿಎಸ್‌ಸಿ ನಡೆಸಿದ ನಾಗರಿಕಾ ಸೇವಾ ಪರೀಕ್ಷೆಯ ಅಂತಿಮ ಹಂತದ ಫಲಿತಾಂಶ ಪ್ರಕಟವಾಗಿದೆ. ರಾಜ್ಯದ 20 ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ. ಕೆ.ಜಿ.ಅಕ್ಷಯ್‌ಸಿಂಹ 77ನೇ ರ್‍ಯಾಂಕ್ ಪಡೆದು ರಾಜ್ಯಕ್ಕೆ ಟಾಪರ್ ಆಗಿದ್ದಾರೆ. ಅವರೂ ಸೇರಿ ಮೂವರು ಅಭ್ಯರ್ಥಿಗಳು 200 ರ್‍ಯಾಂಕ್ ಒಳಗಿದ್ದಾರೆ. ದೇಶದಲ್ಲಿ ಶುಭಂ ಕುಮಾರ್ ಮೊದಲಿಗರು.

**ರ್‍ಯಾಂಕ್ ವಿಜೇತರು:** ಕೆ.ಜೆ.ಅಕ್ಷಯ್ ಸಿಂಹ 77ನೇ ರ್‍ಯಾಂಕ್, ಆರ್.ಯತೀಶ್ 115 ರ್‍ಯಾಂಕ್, ಕೆ.ಎಂ. ಪ್ರಿಯಾಂಕ 121ನೇ, ಎಂ.ನಿಶ್ಚಯ್ ಪ್ರಸಾದ್ 130ನೇ ರ್‍ಯಾಂಕ್, ಎಂ.ಪಿ.ಶ್ರೀನಿವಾಸ್ 235ನೇ ರ್‍ಯಾಂಕ್, ಅನಿರುದ್ಧ್ ಆರ್.ಗಂಗಾವರಾಮ್ 252ನೇ ಡಿ.ಸುರಜ್ 255ನೇ ರ್‍ಯಾಂಕ್, ನೇತ್ರಾ ಮೇಟಿ 326ನೇ ರ್‍ಯಾಂಕ್ ಪಡೆದಿದ್ದಾರೆ.

▶ 7ನೇ ಪುಟಕ್ಕೆ

2ನೇ ಪ್ರಯತ್ನದಲ್ಲೇ ಪಾಸ್ ಮಾಡಿದೆ. ಅದಕ್ಕೆ ಅದೃಷ್ಟ ಮತ್ತು ಪರಿಶ್ರಮ ಎರಡೂ ಬೇಕು. ತಂದೆ ಸರ್ಕಾರಿ ಅಧಿಕಾರಿಯಾಗಿ ನಿವೃತ್ತಿ ಹೊಂದಿದ್ದಾರೆ. ವಿದೇಶಾಂಗ ಸೇವೆ ಆಯ್ಕೆ ಮಾಡಿಕೊಂಡಿದ್ದೇನೆ. ಸಿಗುವ ನಿರೀಕ್ಷೆಯೂ ಇದೆ. ಇತ್ತೀಚೆಗಷ್ಟೇ ನಾನು ಬ್ಯಾಂಕ್ ಉದ್ಯೋಗಕ್ಕೆ ಸೇರಿದ್ದೆ.

• ಕೆ.ಜಿ. ಅಕ್ಷಯ್ ಸಿಂಹ, 77ನೇ ರ್‍ಯಾಂಕ್ ವಿಜೇತ

# ಅಕ್ಷಯ್‌ಗೆ 77ನೇ ರ್‍ಯಾಂಕ್

1ನೇ ಪುಟದಿಂದ ▶ ಉಳಿದಂತೆ, ಮೇಘಾ ಜೈನ್ 354ನೇ ರ್‍ಯಾಂಕ್, ಪ್ರಜ್ವಲ್ 367ನೇ ರ್‍ಯಾಂಕ್, ಸಾಗರ್ ಎ ವಾಡಿ 386ನೇ ರ್‍ಯಾಂಕ್, ನಾಗರಗೋಜೆ ಶುಭಂ 453ನೇ ರ್‍ಯಾಂಕ್, ಮಾಲಶ್ರೀ ಎಂ.ವಿ 504ನೇ ರ್‍ಯಾಂಕ್, ಶಕೀರ್ ಆಹ್ಮದ್ ಎ 583ನೇ ರ್‍ಯಾಂಕ್, ಪ್ರಮೋದ್ ಆರಾಧ್ಯ 601ನೇ ರ್‍ಯಾಂಕ್, ಕೆ.ಧರ್ಮವೀರ ಚವಾಣ್ 657ನೇ ರ್‍ಯಾಂಕ್, ಜಿ.ಮಮತಾ 707ನೇ ರ್‍ಯಾಂಕ್, ಬಿ.ಎನ್.ಅಭಿಷೇಕ್ 708ನೇ ರ್‍ಯಾಂಕ್, ಕೆ.ಸೌರಭ್ 725ನೇ ರ್‍ಯಾಂಕ್ ಹಾಗೂ ಎಚ್.ಸಂತೋಷ್ 751ನೇ ರ್‍ಯಾಂಕ್ ಪಡೆದಿದ್ದಾರೆ.

2019ರಲ್ಲಿ ಬಿ.ಇ ಮುಗಿಸಿ ಯುಪಿಎಸ್‌ಸಿ ವ್ಯಾಸಂಗ ಆರಂಭಿಸಿದೆ. ಐಎಎಸ್ ಆಗಬೇಕು ಎಂಬುದು ಕನಸಾಗಿತ್ತು. ಎರಡನೇ ಅವಧಿಯಲ್ಲಿ 130ನೇ ರ್‍ಯಾಂಕ್ ಲಭ್ಯವಾಗಿದೆ. ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಸೇವೆಯಲ್ಲಿ ಯಾವುದು ಸಿಕ್ಕರೂ ಸೇವೆಗೆ ಹಾಜರಾಗುತ್ತೇನೆ. ಐಎಎಸ್ ಓದಬೇಕಾದರೆ ಯಾವುದೇ ತರಬೇತಿ ಅಗತ್ಯ ಇಲ್ಲ. ಶ್ರದ್ಧೆ, ಕಠಿಣ ಪರಿಶ್ರಮ ಇರಬೇಕು.

• **ಎಂ. ನಿಶ್ಚಯ್ ಪ್ರಸಾದ್**, 130ನೇ ರ್‍ಯಾಂಕ್

ಕೆಎಎಸ್ ಕೂಡ ಬರೆದಿದ್ದೇನೆ. ಯುಪಿಎಸ್‌ಸಿ ಪಾಸ್ ಮಾಡುವುದಕ್ಕೆ ಛಲ ಇರಬೇಕು. ಗುರಿ ತಲುಪುವವರೆಗೂ ಅಧ್ಯಯನದಲ್ಲಿ ನಿರತರಾದಲ್ಲಿ ಮಾತ್ರ ಯಶಸ್ವಿಯಾಗಲು ಸಾಧ್ಯವಾಗಲಿದೆ. ಭೂಗೋಳಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದೆ.

• **ಡಿ. ಸೂರಜ್**, 255ನೇ ರ್‍ಯಾಂಕ್.